**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.18/2021**

**ಚಾಸಾ-4/ಪಿಡಬ್ಲ್ಯೂ-2**

| | |
|---|---|
| **ಹೆಸರು** | ಶಂಕರಲಿಂಗ |
| **ತಂದೆ ಹೆಸರು** | ಶಿವರಾಜ |
| **ವಯಸ್ಸು** | 41 ವರ್ಷಗಳು |
| **ಉದ್ಯೋಗ** | ಅಬಕಾರಿ ಮುಖ್ಯ ಪೇದೆ |
| **ವಾಸ ಸ್ಥಳ** | ಕಲಬುರಗಿ |

**ದಿನಾಂಕ 04.11.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

2018 ರಿಂದ ಸೆಪ್ಟೆಂಬರ್-2023 ರವರೆಗೆ ಅಬಕಾರಿ ರಕ್ಷಕನಾಗಿ ಜೇವರ್ಗಿ ಅಬಕಾರಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 24.07.2020 ರಂದು ನಾನು ಸದರಿ ಪ್ರಕರಣದಲ್ಲಿ ಜಪ್ತಿಪಡಿಸಿಕೊಂಡ ಮುದ್ದೆಮಾಲುಗಳನ್ನು ಚಾಸಾ-7 ರವರ ನಿರ್ದೇಶನದ ಮೇರೆಗೆ ರಾಸಾಯನಿಕ ಪರೀಕ್ಷೆಗಾಗಿ ಚಾಸಾ-6 ರವರ ಕಚೇರಿಗೆ ತೆಗೆದಕೊಂಡು ಹೋಗಿ ಆ ಕುರಿತು ಚಾಸಾ-7 ರವರಿಗೆ ವರದಿ ಸಲ್ಲಿಸಿರುತ್ತೇನೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಒ-1 ರಿಂದ 3 ಎಂದು ಗುರುತಿಸಲಾಗಿದೆ.

ಪಾಟಿ ಸವಾಲುಃ ಆರೋಪಿ ಪರ ವಕೀಲರಿಂದ

ಚಾಸಾ-1 ನನ್ನ ಮೇಲಾಧಿಕಾರಿ. ಎಂ.ಒ-1 ರಿಂದ 3 ಗಳನ್ನು FSL ತೆಗೆದುಕೊಂಡು ಹೋಗಿ ವರದಿ ಪಡೆದು ಹಾಜರುಪಡಿಸಿರುತ್ತೇನೆಂದು ಸುಳ್ಳು ಹೇಳುತ್ತಿರುವೆ ಎಂದರೆ ಸರಿಯಲ್ಲ. ಠಾಣೆಯಲ್ಲಿ ವರದಿ ಬರೆದು ಸಲ್ಲಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿರುವೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ

ಪ್ರ.ದ.ನ್ಯಾ. ದಂಡಾಧಿಕಾರಿಗಳು
ಜೇವರ್ಗಿ